## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1074 |
| ಸದಸ್ಯರ ಹೆಸರು | : | ಶ್ರೀ ಮುನಿರಾಜುಗೌಡ ಪಿ.ಎಂ.<br>(ವಿಧಾನ ಸಭೆಯಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 14.12.2023 |
| ಉತ್ತರಿಸಬೇಕಾದ ಸಚಿವರು | : | ಉಪ ಮುಖ್ಯಮಂತ್ರಿಯವರು |

*******

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬಿಡಿಎ ನಿರ್ಮಿಸುತ್ತಿರುವ ಶಿವರಾಮ ಕಾರಂತ ಬಡಾವಣೆಯ ವ್ಯಾಪ್ತಿಯಲ್ಲಿರುವ ಒಟ್ಟು ಕಂದಾಯ ಬಡಾವಣೆಗಳು ಎಷ್ಟು; | ಡಾ॥ ಕೆ. ಶಿವರಾಮಕಾರಂತ ಬಡಾವಣೆಗಾಗಿ ಭೂಸ್ವಾಧೀನಪಡಿಸಿ ಕೊಳ್ಳಲಾಗಿರುವ ಜಮೀನಿನ ಪೈಕಿ ಒಟ್ಟು 476 ಎಕರೆ 32.51 ಗುಂಟೆ ವಿಸ್ತೀರ್ಣದಲ್ಲಿ ಕಂದಾಯ ಬಡಾವಣೆಗಳು ರಚನೆಯಾಗಿರುತ್ತದೆ. |
| ಆ) | ಸದರಿ ಕಂದಾಯ ಬಡಾವಣೆಗಳಿಗೆ ಬಿಡಿಎ ವತಿಯಿಂದ ವಶಪಡಿಸಿಕೊಂಡ ಜಾಗದಲ್ಲಿ ರಸ್ತೆ ನಿರ್ಮಿಸಿ ಸಂಪರ್ಕ ಕಲ್ಪಿಸಲು ಅವಕಾಶವಿದೆಯೇ; | ಡಾ॥ ಕೆ. ಶಿವರಾಮ ಕಾರಂತ ಬಡಾವಣೆಯಲ್ಲಿ ಸುಗಮ ಸಂಚಾರಕ್ಕಾಗಿ ರಸ್ತೆ ಜಾಲವನ್ನು ಯೋಜಿಸಿ ಅಳವಡಿಸಲಾಗಿರುತ್ತದೆ. ಈ ರಸ್ತೆ ಸಂಪರ್ಕ ಜಾಲವು ಡಾ॥ಕೆ.ಶಿವರಾಮ ಕಾರಂತ ಬಡಾವಣೆಯ ವ್ಯಾಪ್ತಿಯ ಒಳಗಡೆ ಇರುವ ಕಂದಾಯ ಬಡಾವಣೆಗಳಿಗೆ ಸ್ವಾಭಾವಿಕವಾಗಿ ಉಪಗಮನ ರಸ್ತೆ ಸಂಪರ್ಕ ಕಲ್ಪಿಸಿರುತ್ತವೆ. ಕಂದಾಯ ಬಡಾವಣೆಗಳಿಗೊಸ್ಕರವಾಗಿ ಪ್ರತ್ಯೇಕವಾಗಿ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಶಪಡಿಸಿಕೊಂಡ ಜಾಗದಲ್ಲಿ ರಸ್ತೆ ನಿರ್ಮಿಸಿ ಸಂಪರ್ಕ ಕಲ್ಪಿಸಿರುವುದಿಲ್ಲ. |
| ಇ) | ಹಾಗಿದ್ದಲ್ಲಿ, ಇದಕ್ಕೆ ಕಂದಾಯ ಬಡಾವಣೆಯ ಮಾಲೀಕರಿಂದ ಬಿಡಿಎ ಪಡೆಯುವ ಶುಲ್ಕವೆಷ್ಟು; | ಉದ್ಭವಿಸುವುದಿಲ್ಲ. |
| ಈ) | ಶುಲ್ಕ ಪಡೆಯದೆ ಎಷ್ಟು ಕಂದಾಯ ಬಡಾವಣೆಗಳಿಗೆ ರಸ್ತೆ ಸಂಪರ್ಕ ಕಲ್ಪಿಸಲಾಗಿದೆ. ಇದರಿಂದ ಬಿಡಿಎ ಗೆ ಉಂಟಾಗುವ ನಷ್ಟದ ಪ್ರಮಾಣ ಎಷ್ಟು? (ಸದರಿ ಬಡಾವಣೆಗಳ ವಿವರ ನೀಡುವುದು. | |

ಸಂಖ್ಯೆ: ನಅಇ 294 ಬೆಂಭೂಸ್ವಾ 2023

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ